ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಸೋಮವಾರ ೯ನೇ ಸೆಪ್ಟೆಂಬರ್ ೧೯೯೧, ಭಾದ್ರಪದ ೯, ಶಕ ೧೯೧೩

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೨.೧೫ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ರಾಣೆಬೆನ್ನೂರು ತಾಲ್ಲೂಕಿನ ಅಣೆಕಟ್ಟುಗಳ ನಿರ್ಮಾಣ.

2528- ಶ್ರೀ ಕೆ.ಬಿ. ಕೋಳಿವಾಡ (ರಾಣೆಬೆನ್ನೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಣೆಬೆನ್ನೂರು ತಾಲ್ಲೂಕಿನಲ್ಲಿ ಕುಮುದ್ವತಿ ನದಿಗೆ ಅಡ್ಡಲಾಗಿ ಲಿಂಗದಹಳ್ಳಿ, ನಿಟ್ಟೂರು ಹಾಗೂ ಹೆರೆಮಗನೂರು ಮತ್ತು ಚಿಕ್ಕಮಗನೂರು ಗ್ರಾಮಗಳ ನಡುವೆ ಬ್ಯಾರೇಜುಗಳನ್ನು ನಿರ್ಮಿಸಲು ಮಂಜೂರಾತಿ ನೀಡಲು ಮನವಿ ಪತ್ರಗಳು ಸರ್ಕಾರಕ್ಕೆ ಬಂದಿವೆಯೇ?

ಆ) ಹಾಗಿದ್ದಲ್ಲಿ, ಸರ್ಕಾರವು ಸದರಿ ಬ್ಯಾರೇಜ್ ಯೋಜನೆಗಳನ್ನು ಮಂಜೂರು ಮಾಡಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಹೌದು.

ಆ) 1) ಲಿಂಗದ ಹಳ್ಳಿ ಬ್ಯಾರೇಜ್ : ಈ ಕಾಮಗಾರಿಯ ನಕ್ಷೆ ಮತ್ತು ಅಂದಾಜು ಪತ್ರಿಕೆಗಳಿಗೆ ರೂ. 24.964 ಲಕ್ಷಗಳಿಗೆ 1986-87ರಲ್ಲಿ ತಾಂತ್ರಿಕ ಮಂಜೂರಾತಿ ನೀಡಿ ಸದರಿ ಕಾಮಗಾರಿಯನ್ನು ಬರಗಾಲ ಪೀಡಿತ ಪ್ರದೇಶಾಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ, ಈ ಕಾಮಗಾರಿಯು ಧಾರವಾಡ ಜಿಲ್ಲಾ ಪರಿಷತ್‌ಗೆ ಸೇರಿದೆ.

2) ನಿಟ್ಟೂರು ಬ್ಯಾರೇಜ್ : ಈ ಕಾಮಗಾರಿಯ ವಿನ್ಯಾಸಕ್ಕೆ ಮೇ 1991ರಲ್ಲಿ ಅನುಮೋದನೆ ನೀಡಿದ್ದು ಅಂದಾಜು ಪಟ್ಟಿಯು ತಯಾರಿಯ ಹಂತದಲ್ಲಿದೆ. ಈ ಕಾಮಗಾರಿಯು 1991-92ನೇ ಸಾಲಿನ ಅಯವ್ಯಯ ಪಟ್ಟಿಯಲ್ಲಿ ರೂ.5,000ಗಳ ಅನುದಾನದೊಂದಿಗೆ ಸೇರಿರುತ್ತದೆ. ಈ ಕಾಮಗಾರಿಯ ತಾಂತ್ರಿಕ ಮತ್ತು ಆರ್ಥಿಕ ಶಕ್ಯತೆಗಳನ್ನು ಪರಿಶೀಲಿಸಿದನಂತರ ಹಣ ಕಾಸಿನ ಲಭ್ಯತೆಯನ್ನವಲಂಭಿಸಿ ಮಂಜೂರಾತಿ ನೀಡಲಾಗುವುದು.

3) ಚಿಕ್ಕ ಮಗನೂರು ಮತ್ತು ಹಿರೆಮಗನೂರು ಗ್ರಾಮಗಳ ಹತ್ತಿರ ಬ್ಯಾರೇಜ್ ನಿರ್ಮಾಣ ಈ ಕಾಮಗಾರಿಯು ಹೊಸ ಕೆಸಸವಾಗಿದ್ದು ಇದು ಈ ವರ್ಷದ

ಆಯವ್ಯಯ ಪಟ್ಟಿಯಲ್ಲಿ ಸೇರಿರುವುದಿಲ್ಲ. ಆರ್ಥಿಕ ಮತ್ತು ತಾಂತ್ರಿಕ ಶಕ್ಯತೆಗಳನ್ನು ಪರಿಶೀಲಿಸಿದನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕೆ.ಬಿ. ಕೋಳೀವಾಡ್ : ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಈಗ ಲಿಂಗದಹಳ್ಳಿ ಬ್ಯಾರೇಜ್ ಕಾಮಗಾರಿಗೆ 1986-87ರಲ್ಲೇ ಡಿಪಿಎಪಿ ಯೋಜನೆಯಲ್ಲಿ ರೂ.24.964 ಲಕ್ಷಕ್ಕೆ ಮಂಜೂರಾತಿ ದೊರಕಿದೆ ಎಂದು ಹೇಳಿದ್ದಾರೆ. ಆದರೆ ಕೇವಲ ಹತ್ತು ಲಕ್ಷ ರೂ.ಗಳನ್ನು ಮಾತ್ರ ಖರ್ಚು ಮಾಡಿ, ಡಿಪಿಎಪಿಯಲ್ಲಿ ಹಣ ಮುಗಿದು ಹೋಗಿದೆ ಎಂದು ಜಿಲ್ಲಾ ಪರಿಷತ್ತಿನವರು ಇದನ್ನು ಮಾಡಬೇಕೆಂದು ಹೇಳಿದ್ದಾರೆ. ಜಿಲ್ಲಾ ಪರಿಷತ್ತಿನವರು ದುಡ್ಡು ಇಲ್ಲವೆಂದು ಹೇಳುತ್ತಾರೆ. ಈ ಕಾಮಗಾರಿಗೆ ಹತ್ತು ಲಕ್ಷ ರೂ.ಗಳು ಇನ್‌ವೆಸ್ಟ್‌ಮೆಂಟ್ ಆಗಿದ್ದರೂ ಇದು ಯಾವುದಕ್ಕೂ ಉಪಯೋಗಕ್ಕೆ ಬಾರದಂತೆ ಆಗಿದೆ. ಇದಕ್ಕೆ ಸರ್ಕಾರದವರು ಹೆಚ್ಚಿನ ಹಣ ಸಹಾಯವನ್ನು ಕೊಟ್ಟು ಈ ಕೆಲಸವನ್ನು ಮುಂದುವರಿಸುತ್ತಾರೆಯೇ ಎಂದು ಕೇಳಬಯಸುತ್ತೇನೆ. ಎರಡನೆಯದಾಗಿ, ನಿಟ್ಟೂರ್ ಬ್ಯಾರೇಜ್ಗೆ ನಾಮಿನಲ್ ರೂ. 5000-00 ಪ್ರೊವೈಡ್ ಮಾಡಿ ಅದನ್ನು ಆಯವ್ಯಯ ಪಟ್ಟಯಲ್ಲಿ ಸೇರಿಸಲಾಗಿದೆ. ಎಂದು ಹೇಳಿದ್ದಾರೆ. ಸರ್ಕಾರದವರು ಇದಕ್ಕೆ 13ರಷ್ಟು ಹಣವನ್ನು ಹಾಕಿ ಇದಕ್ಕೆ ತಾಂತ್ರಿಕ ಮಂಜೂರಾತಿ ಕೊಟ್ಟು ಈ ಕೆಲಸವನ್ನು ಪ್ರಾರಂಭ ಮಾಡಿಸುವರೆ ಎಂದು ಕೇಳಬಯಸುತ್ತೇನೆ. ಮೂರನೆಯದಾಗಿ, ಸರ್ಕಾರದವರು ಈಗಾಗಲೇ ಪ್ರಾಮಿಸ್ ಮಾಡಿರುವ ಹಾಗೆ, ಈ ಕೆಲಸವನ್ನು ಈ ವರ್ಷ ಪ್ರಾರಂಭ ಮಾಡಿಸುವರೇ ಎಂದು ಕೇಳಬಯಸುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ಮಂತ್ರಿ) : ಮಾನ್ಯ ಸಭಾಧ್ಯಕ್ಷರೇ, ಲಿಂಗದಹಳ್ಳಿ ಬ್ಯಾರೇಜ್ ಕೆಲಸ ನಮಗೆ ಬರುವುದಿಲ್ಲ. ಜಿಲ್ಲಾ ಪರಿಷತ್ತಿನವರು ಈ ಕೆಲಸವನ್ನು ಈಗಾಗಲೇ ಕೈಗೆತ್ತಿಕೊಂಡಿದ್ದು, ಹತ್ತು ಲಕ್ಷ ರೂ.ಗಳನ್ನು ಇದಕ್ಕೆ ಖರ್ಚು ಮಾಡಿ, ಉಳಿದಿದ್ದನ್ನು ಸರಿ ಪಡಿಸಲಾಗದೆ ಈ ಕೆಲಸವನ್ನು ಕೈಬಿಟ್ಟಿದ್ದಾರೆ. ಜಿಲ್ಲಾ ಪರಿಷತ್‌ನವರು ಅದನ್ನು ನಮಗೆ ವರ್ಗಾಯಿಸಿದರೆ, ಅದನ್ನು ತೆಗೆದುಕೊಳ್ಳಲಾಗುತ್ತದೆ. ನಿಟ್ಟೂರು ಬ್ಯಾರೇಜ್ ಕಾಮಗಾರಿಗೆ ಐದು ಸಾವಿರ ರೂ.ಗಳ ಅನುದಾನವನ್ನು ಕೊಟ್ಟಿದ್ದೇವೆ. ಇದಕ್ಕೆ ತಗಲುವ 13ರಷ್ಟು ಹಣವನ್ನು ಕೊಡಲು ಕೇಳಿದ್ದಾರೆ. ಆರ್ಥಿಕ ಸ್ಥಿತಿಗನುಗುಣವಾಗಿ ಇದನ್ನು ನೋಡಿಕೊಂಡು ಆಯವ್ಯಯದಲ್ಲಿ ಸೇರಿಸುತ್ತೇವೆ. ಚಿಕ್ಕಮಗನೂರು ಮತ್ತು ಹಿರೆಮಗನೂರು ಬ್ಯಾರೇಜ್ ಕಾಮಗಾರಿಯನ್ನು ಆರ್ಥಿಕ ಪರಿಸ್ಥಿತಿಯನ್ನು ಆಯವ್ಯಯದಲ್ಲಿ ಸೇರಿಸುವ ಪ್ರಯತ್ನ ಮಾಡುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಕೆ.ಬಿ. ಕೋಳೀವಾಡ್ : ಲಿಂಗದಹಳ್ಳಿ ಬ್ಯಾರೇಜ್ ಕಾಮಗಾರಿಯು ಇತ್ತೀಚೆಗೆ ಅಷ್ಟೇ ಜಿಲ್ಲಾ ಪರಿಷತ್ತಿಗೆ ವರ್ಗವಾಗಿದೆ. ಮೊದಲು ಇದು ಮೈನರ್ ಇರಿಗೇಷನ್ ಇಲಾಖೆಯಲ್ಲೇ ಇದ್ದು, ಮೈನರ್ ಇರಿಗೇಷನ್ ಇಲಾಖೆಯವರು ಇದರ ಅರ್ಧದಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ಈಗ ಬ್ಯಾರೇಜ್ ಕಾಮಗಾರಿಯನ್ನು ಸ್ಪೆಶಲ್ ಆಗಿ ಜಿಲ್ಲಾ ಪರಿಷತ್ತಿಗೆ ವರ್ಗಾವಣೆ ಮಾಡಲು ಕಾರಣವೇನು? ಪರಿಷತ್ತಿನಿಂದ ಮೈನರ್ ಇರಿಗೇಶನ್ ಇಲಾಖೆಗೆ ತೆಗೆದುಕೊಳ್ಳಲು ಪ್ರಯತ್ನ ಮಾಡಲಾಗುತ್ತಿದೆಯೋ ಇಲ್ಲವೋ ಎಂದು ಕೇಳಬಯಸುತ್ತೇನೆ. ನಿಟ್ಟೂರು ಹಾಗೂ ಚಿಕ್ಕಮಗನೂರು ಮತ್ತು ಹಿರೇಮಗನೂರು ಬ್ಯಾರೇಜ್ ಕಾಮಗಾರಿಗೆ 13ರಷ್ಟು ಹಣವನ್ನು ತಾವೇ ಪ್ರೋವೈಡ್ ಮಾಡಬೇಕೆಂದು ಕೇಳುತ್ತೇನೆ. ಈ ವ್ಯವಸ್ಥೆಯನ್ನು ಮಾಡಿ ಈ ಕಾಮಗಾರಿಯನ್ನು ಈ ವರ್ಷ ಪ್ರಾರಂಭ ಮಾಡಿಸಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಬಯಸುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬರುವಂಥ ಕೆರೆಗಳ ಕೆಲಸವನ್ನು ನಾವು ಮಾಡುವುದಿಲ್ಲ. ಅದನ್ನು ಆರ್‌ಡಿಪಿಆರ್ ರವರು ಸರ್ಕಾರದ ನಿಯಮಗಳ ಪ್ರಕಾರ ನಮಗೆ ವಾಪಸ್ ಕೊಟ್ಟರೆ, ಈ ಕೆಲಸವನ್ನು ಕೈಗೆತ್ತಿಕೊಳ್ಳಬಹುದು. ಹೀಗೆ ಮಾಡಿದರೆ, ಈಗ ಆಗಿರುವಂಥ ಹತ್ತು ಲಕ್ಷ ರೂ.ಗಳ ಖರ್ಚಿನ ಜೊತೆಗೆ ಉಳಿದ ಹಣವನ್ನು ಖರ್ಚು ಮಾಡಿ, ಬ್ಯಾರೇಜನ್ನು ಪ್ರಾರಂಭ ಮಾಡಿಸಲು ಸರ್ಕಾರ ಬದ್ಧವಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ ಮತ್ತು ಈ ಕೆಲಸಗಳನ್ನು ಆರ್ಥಿಕ ಅನುಗುಣವಾಗಿ ಪ್ರಾರಂಭ ಮಾಡಲಾಗುತ್ತದೆ ಎಂದು ಸಹ ನಾನು ಹೇಳಬಯಸುತ್ತೇನೆ.

ಶ್ರೀ ಕೆ.ಬಿ. ಕೋಳೀವಾಡ್ : ಈ ಹತ್ತು ಲಕ್ಷ ರೂ.ಗಳು ಖರ್ಚಾಗಿದೆ ಎಂದು ಏನು ಹೇಳಲಾಗಿದೆ, ಇದರಲ್ಲಿ ಸಾಕಷ್ಟು ಅವ್ಯವಹಾರ ನಡೆದಿದೆ ಎನ್ನಲಾಗಿದೆ, ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರಿಗೆ ಒಂದು ಮನವಿಯನ್ನು ಕೊಟ್ಟಿದ್ದೇನೆ. ಅದರ ಬಗ್ಗೆ ಎನ್‌ಕ್ವೈರಿ ಮಾಡಲಾಗಿದೆಯೇ? ಮಡದಿದ್ದರೆ ಮಾಡುವಿರೇ ಹೇಗೆ ಎಂದು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಇದರಲ್ಲೂ ಅವ್ಯವಹಾರ ನಡೆದಿದೆಯೇ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಇದರ ಬಗ್ಗೆ ವಿಚಾರಣೆ ಮಾಡುತ್ತೇನೆ.

ವಾರಾಹಿ ನೀರಾವರಿ ಯೋಜನೆ.

2533 - ಶ್ರೀ ಜಿ.ಎಸ್. ಆಚಾರ್ (ಬೈಂದೂರು) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯು ಉತ್ತರ ಭಾಗದ ಸಹಸ್ರಾರು ಹೆಕ್ಟೇರ್ ಜಮೀನಿಗೆ ವ್ಯವಸಾಯಕ್ಕಾಗಿ ನೀರು ಪೂರೈಸುವ ವರಾಹಿ ನೀರಾವರಿ ಯೋಜನೆಯ ಕಾಮಗಾರಿ ಯಾವಾಗ ಶಂಕು ಸ್ಥಾಪನೆಗೆ ಮಾಡಲಾಯಿತು?

ಆ) ಸದರಿ ಯೋಜನೆಯಲ್ಲಿ ಇಲ್ಲಿಯವರೆವಿಗೆ ಯಾವ ಯಾವ ಕಾಮಗಾರಿಗಳಿಗೆ ಎಷ್ಟೆಷ್ಟು ಹಣ ವೆಚ್ಚ ಮಾಡಲಾಗಿದೆ ಹಾಗೂ ಸಿಬ್ಬಂದಿಗಳ ವೇತನಕ್ಕಾಗಿ ಎಷ್ಟು ವ್ಯಯ ಮಾಡಲಾಗಿದೆ?

ಇ) ಈ ಯೋಜನೆಯ ಕಾಮಗಾರಿ ವಿಳಂಬಕ್ಕೆ ಕಾರಣಗಳೇನು?

ಈ) ಈ ಯೋಜನೆಯು ಕೆಲಸಗಳನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) ದಿನಾಂಕ 30-12-80 ರಂದು ಶಂಕು ಸ್ಥಾಪನೆ ಮಾಡಲಾಯಿತು.

ಆ) ಸದರಿ ಯೋಜನೆಗೆ 1991ರ ಜುಲೈ ಅಂತ್ಯದವರೆಗೆ ಈ ಕೆಳಕಂಡ ವ್ಯಯ ಮಾಡಲಾಗಿದೆ.

1.	ಕಾಮಗಾರಿಗಳ ವೆಚ್ಚ	1,63,36,294-00
2.	ಸಾಗಾಣಿಕೆ ಹಾಗೂ ಯಂತ್ರೋಪಕರಣಗಳ ವೆಚ್ಚ	15,14,600-00
3.	ಸಿಬ್ಬಂದಿ ವೆಚ್ಚ	85,07,006-00
	ಒಟ್ಟು ರೂ.	**2,63,57,900-00**